ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೩೩ (೧೭೧೦)

ಸದಸ್ಯರ ಹೆಸರು ಶ್ರೀ ಹೊನ್ನಾಳಿ ಜಬ್ಬಾರ್ ಖಾನ್
ಹಯಾತ್ ಖಾನ್ (ಹುಬ್ಬಳ್ಳಿ)

ಉತ್ತರಿಸುವ ಸಚಿವರು ಶ್ರೀ ರಾವು ನಾಯಕ್ ಬೆಳವಾಗಿ
(ಪಶುಸಂಗೋಪನೆ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಧಾರವಾಡ ಹಾಲು ಒಕ್ಕೂಟವು ಕಳೆದ ೨೦೦೫-೦೬, ೨೦೦೬-೦೭ ರಲ್ಲಿ ನಷ್ಟ ಅನುಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ನಷ್ಟ ಅನುಭವಿಸಲಿಕ್ಕೆ ಕಾರಣಗಳಾವುವು (ವಿವರ ನೀಡುವುದು)	ಧಾರವಾಡ ಹಾಲು ಒಕ್ಕೂಟವು ೨೦೦೫-೦೬ನೇ ಸಾಲಿನಲ್ಲಿ ನಷ್ಟ ಅನುಭವಿಸಿರುವುದು ಹಗೂ ೨೦೦೬-೦೭ನೇ ಸಾಲಿನಲ್ಲಿ ತಾತ್ಕಾಲಿಕ ಲಾಭದಲ್ಲಿ ಮುಂದುವರದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಈ ಒಕ್ಕೂಟದಲ್ಲಿ ಹಾಲು ಸಂಗ್ರಹಣೆ ಹಾಗೂ ಮಾರಾಟದ ಪ್ರಮಾಣ ಕಡಿಮೆ ಇದ್ದು ಒಕ್ಕೂಟದ ಹಾಲು ಉತ್ಪನ್ನ ಘಟಕಕ್ಕೆ ಹಾಲು ಪೂರೈಕೆಯಾಗದಿರುವುದರಿಂದ ಸಿಬ್ಬಂದಿ ಹಾಗೂ ನಿರ್ವಹಣಾ ವೆಚ್ಚಗಳು ಆರ್ಥಿಕವಾಗಿರುವುದು ಮುಖ್ಯ ಕಾರಣಗಳಾಗಿರುತ್ತವೆ
ಆ)	ಧಾರವಾಡ ಹಾಲು ಒಕ್ಕೂಟ ಅನುಭವಿಸುತ್ತಿರುವ ನಷ್ಟ ಭರಿಸಲು ಸರ್ಕಾರ ಕೈಗೊಂಡ ಕ್ರಮವೇನು?	ಧಾರವಾಡ ಹಾಲು ಒಕ್ಕೂಟದ ನಷ್ಟವನ್ನು ಭರಿಸಲು ಸರ್ಕಾರವು ೧೯೮೬ ರಿಂದ ೨೦೦೧-೦೨ ರವರಿಗೆ ಒಟ್ಟು ರೂ ೧೦೮೩.೪೨ ಲಕ್ಷಗಳ ಅನುದಾನ ನೀಡಿರುತ್ತದೆ ನಂತರದ ನಷ್ಟವನ್ನು ಒಕ್ಕೂಟವೇ ಭರಿಸಿಕೊಳ್ಳಬೇಕಾಗುತ್ತದೆ

ಇ)	ಧಾರವಾಡ ಹಲು ಒಕ್ಕೂಟವು ಪ್ರತಿ ತಿಂಗಳಿಗೆ ಸಂಗ್ರಹಿಸುತ್ತಿರುವ ಹಣ ಎಷ್ಟು ? ಮಾರುಕಟ್ಟೆಯಲ್ಲಿ ಇತರ ಹಾಲಿಗಿಂತ ಕೆ ಎಂ ಎಸ್ ಹಾಲಿನ ಬೇಡಿಕೆ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?	ಧಾರವಾಡ ಹಾಲು ಒಕ್ಕೂಟವು ಹಾಲು ಹಾಗೂ ಇತರ ಉತ್ಪನ್ನಗಳಿಂದ ಪ್ರತಿ ತಿಂಗಳು ಸರಾಸರಿ ರೂ ೩೩೭ ೨೭ ಲಕ್ಷಗಳಷ್ಟು ಹಣ ಸಂಗ್ರಹಿಸುತ್ತಿರುತ್ತದೆ ಒಕ್ಕೂಟದ ಮಾರುಕ್ಟೆ ಕ್ಷೇತ್ರದಲ್ಲಿ ಖಾಸಗಿ ಹಾಲು ಮಾರಾಟಗಾರರ ಪೈಪೋಟಿ ತೀವ್ರವಾಗಿರುವುದರಿಂದ ಕೆ ಎಂ ಎಫ್ ಹಾಲಿಗೆ ಸ್ವಲ್ಪ ವಾಟ್ಟಿನ ಬೇಡಿಕೆ ಕಡಿಮೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ
ಈ)	ಕೆ ಎಂ ಎಫ್ ಹಾಲು ಹಆಗೂ ಇತರೆ ಉತ್ಪಾದನೆಗಳು ಮಾರುಕಟ್ಟೆಯಲ್ಲಿ ಹೆಚ್ಚಿನ ಪ್ರಚಾರವಿಲ್ಲದೆ ಮಾರುಕಟ್ಟೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?	ಧಾರವಾಡ ಹಾಲು ಒಕ್ಕೂಟದ ಮಾರುಕಟ್ಟೆ ಕ್ಷೇತ್ರದಲ್ಲಿ ಕೆ ಎಂ ಎಫ್ ಹಾಲು ಉತ್ಪನ್ನಗಳಿಗೆ ಬೇಡಿಕೆ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಬೇಡಿಕೆಯನ್ನು ಹೆಚ್ಚಿಸಲು ಕರ್ನಾಟಕ ಹಾಲು ಮಹಾಮಂಡಳಿ ವತಿಯಿಂದ ಧಾರವಾಡ ಹಾಲು ಒಕ್ಕೂಟದ ಹಾಲು ಮತ್ತು ಉತ್ಪನ್ನಗಳ ಪ್ರಚಾರಕ್ಕೆ ೨೦೦೬-೦೭ನೇ ಸಾಲಿನಲ್ಲಿ ರೂ ೫೦ ಲಕ್ಷವನ್ನು ಅನುದಾನವಾಗಿ ನೀಡಲಾಗಿರುತ್ತದೆ ಒಕ್ಕೂಟವು ಸಹ ತನ್ನ ಪಾಲಿನ ರೂ ೫೦ ಲಕ್ಷವನ್ನು ಸೇರಿಸಿ ಒಟ್ಟು ರೂ ೧೦೦ ಲಕ್ಷಗಳಲ್ಲಿ ಪ್ರಚಾರ ಕೈಗೊಳ್ಳುತ್ತಿದೆ